ಕೆ.ಜಿ.ಬೋಪಯ್ಯ : ಅಧ್ಯಕ್ಷರೆ, ಆ ರೀತಿ ಆಗಿಲ್ಲ. ಇವರೇ self-declaration ಮಾಡಿಕೊಂಡಿದ್ದಾರೆ. ಇಲ್ಲಿ ಲಿಸ್ಟ್ ಇದೆ ಅದನ್ನು ನಾನು ಓದುತ್ತೇನೆ. Proposed under Section 4 of Betta land (Baane),ಕೊಡಗಿನಲ್ಲಿ 36 ಬಗೆಯ ಬಾಣೆಯಿದೆ. ಬಾಣೆ ಎಂದರೆ, ಅದು ಏನು ಬಾಣೆ? ಈ ತರಹ vague ಉತ್ತರವನ್ನು ಕೊಟ್ಟರೆ ಹೇಗೆ?

ಶ್ರೀ ಡಿ.ಎನ್.ಜೀವರಾಜ್ : ಇದನ್ನು ಅರ್ಧ ಗಂಟೆ ಚರ್ಚೆಗೆ ಹಾಕಿ.

(ಗೊಂದಲ)

ಶ್ರೀ ಬಿ.ರಮಾನಾಥ ರೈ : ನಾವು ಎಲ್ಲಾ ಸಮಿತಿಗಳನ್ನು ರಚನೆ ಮಾಡಿದ್ದೇವೆ. ಇನ್ನು ಆರು ತಿಂಗಳೊಳಗೆ ಎಲ್ಲವನ್ನು affidavit ಮಾಡುತ್ತೇವೆ. ಅಧ್ಯಕ್ಷರೆ, ಇದು ಒಂದು ದೊಡ್ಡ ತೀರ್ಮಾನವಲ್ಲವೇ?

ಶ್ರೀ ಕೆ.ಜಿ.ಬೋಪಯ್ಯ : 15–05–2014ರ ನಿಮ್ಮ ನೋಟಿಫಿಕೇಷನ್‌ನಲ್ಲಿ ಅದು ಇಲ್ಲ.

ಅಧ್ಯಕ್ಷರು : ಇದನ್ನು ಚರ್ಚೆಗೆ ಹಾಕೋಣ.

ಶ್ರೀ ಕೆ.ಜಿ.ಬೋಪಯ್ಯ : ತಾವು ಎಲ್ಲಿ ತಪ್ಪಿದ್ದೀರಿ ಎಂದು ಚರ್ಚೆಯಲ್ಲಿ ನಾನು ಉತ್ತರ ಕೊಡುತ್ತೇನೆ.

ಶ್ರೀ ಬಿ.ರಮಾನಾಥ ರೈ : ಸನ್ಮಾನ್ಯ ಗೌರವಾನ್ವಿತ ಸದಸ್ಯರೇ ನಾವು ಮಹತ್ವದ ತೀರ್ಮಾನವನ್ನು ತೆಗೆದುಕೊಂಡಿದ್ದೇವೆ. ಯಾವ C & D ಜಾಗವಿದೆ, ಯಾವ deemed forest ಇದೆ ಅದು ಕಾಣೆ ಇರಬಹುದು, ಬಾಣೆ ಇರಬಹುದು, ಕುಮುಚಿ ಇರಬಹುದು, ಬಗರ್‌ಹುಕುಂನಲ್ಲಿ ಮಂಜೂರಾತಿಯಾಗಿರುವಂಥದ್ದು ಆಗಿರಬಹುದು ಎಲ್ಲವನ್ನೂ ವಿರಹಿತ ಮಾಡುವಂಥ ಪ್ರಕ್ರಿಯೆಯನ್ನು ನಾವು ಈಗಾಗಲೇ ಪ್ರಾರಂಭ ಮಾಡಿದ್ದೇವೆ. ಅದಕ್ಕೆ ಸರ್ವೆ ಕಾರ್ಯ ಆಗುತ್ತಿದೆ. ಇದೊಂದು ಮಹತ್ವದ ಕಾರ್ಯಕ್ರಮವೆಂದು ನಾನು ಭಾವಿಸಿಕೊಂಡಿದ್ದೇನೆ.

10(72) ಅಕ್ರಮ ಸಕ್ರಮ ಪ್ರಕರಣದಲ್ಲಿ ಕ್ರಮ ಕೈಗೊಳ್ಳದೇ ಇರುವುದು.

ಅಧ್ಯಕ್ಷರು : ಅವರು ಕಾಲಾವಕಾಶವನ್ನು ಕೇಳಿದ್ದಾರೆ.

ಶ್ರೀ ವಿ.ಸುನೀಲ್‌ಕುಮಾರ್ : ಇದು ಪಾಲಿಸಿ matter ಆಗಿದೆ. ಅದರಲ್ಲಿ ಕಾಲಾವಕಾಶವಿಲ್ಲ.

ಶ್ರೀ ಸಿ.ಟಿ.ರವಿ : ಅದೊಂದು ಕಾಯಿಲೆಯಾಗಿದೆ. ಈ ಕಾಲು hour ನಲ್ಲಿ ಕಾಲಾವಕಾಶ ಕೇಳುವುದು ಅಧಿಕಾರಿಗಳ ಕಾಯಿಲೆಯಾಗಿದೆ.

ಶ್ರೀ ವಿ.ಸುನೀಲ್‌ಕುಮಾರ್ : ಇದು ಕಳೆದ ಅಧಿವೇಶನದಲ್ಲಿ ಕೇಳಿದ ಪ್ರಶ್ನೆ ಆಗಿದೆ. ಅದಕ್ಕೆ ಇದುವರೆಗೆ ಉತ್ತರ ಬಂದಿಲ್ಲ. ಮತ್ತೆ ಕಾಲಾವಕಾಶ ಕೇಳಿದರೆ ಹೇಗೆ ?

(ಗೊಂದಲ)

ಶ್ರೀ ಪಿ.ಟಿ.ರವಿ : ನಾನು 11 ಪ್ರಶ್ನೆಗಳಿಗೆ ಉತ್ತರ ಬಂದಿಲ್ಲವೆಂದು ನಿಮಗೆ ಒಂದು ಪತ್ರವನ್ನು ಬರೆದಿದ್ದೆ. ಕಾಲಾವಕಾಶ ಕೇಳುವುದು ಇವರಿಗೊಂದು ಕಾಯಿಲೆಯಾಗಿದೆ.

ಅಧ್ಯಕ್ಷರು : ಈ ಅಧಿವೇಶನದಲ್ಲೇ ಉತ್ತರವನ್ನು ಕೊಡಿಸುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ : ಅಧ್ಯಕ್ಷರೆ, ಇದಕ್ಕೆ ಉತ್ತರ ಹೇಳುವುದು ಬಹಳ ಸುಲಭವಾಗಿದೆ. ಇದನ್ನೂ ಹೇಳುವುದಿಲ್ಲವೆಂದರೆ ಹೇಗೆ? Last time ಅಧಿವೇಶನದಲ್ಲೇ ಅವರು ಕೇಳಿದರು.

ಶ್ರೀ ವಿ.ಸುನೀಲ್ ಕುಮಾರ್ : ಅಧ್ಯಕ್ಷರೆ, ನೀವು ನನ್ನ ರಕ್ಷಣೆಗೆ ಬರಬೇಕು. ಇದು policy matter ಆಗಿದೆ. ತಾವು ಒಮ್ಮೆ ಪ್ರಶ್ನೆಯನ್ನು ನೋಡಿ. 15 ದಿವಸಗಳ ಕಾಲಾವಕಾಶ ಏಕೆ ಬೇಕು ಎಂಬುದನ್ನು ಕೇಳಿ.

ಅಧ್ಯಕ್ಷರು : ಎಲ್ಲಾ ಇಲಾಖೆಯಿಂದ, ಜಿಲ್ಲೆಯಿಂದ ಮಾಹಿತಿ ಬರಬೇಕಾಗಿದೆ.

ಶ್ರೀ ವಿ.ಸುನೀಲ್‌ಕುಮಾರ್ : ನಾನು ಅದರಲ್ಲಿ ಜಿಲ್ಲಾವಾರು, ತಾಲ್ಲೂಕುವಾರು ಮಾಹಿತಿ ಕೇಳಿಲ್ಲ. ಅಕ್ರಮ–ಸಕ್ರಮದ ಬಗ್ಗೆ ಮಾತ್ರ ಕೇಳಿದ್ದೇನೆ. ಇಡೀ ರಾಜ್ಯದ policy matter ಒಂದನ್ನು ಮಾತ್ರ ಕೇಳಿದ್ದೇನೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಆ ಪ್ರಶ್ನೆಗಳಲ್ಲಿ ವಿವರಗಳನ್ನು ಕೇಳಿಲ್ಲ. ಪಾಲಿಸಿ ಏನು ಎನ್ನುವಂಥದ್ದನ್ನು ಕೇಳಿದ್ದಾರೆ. ಈ ಬಗ್ಗೆ ಚುಕ್ಕೆ ಗುರುತಿಲ್ಲದ ಪ್ರಶ್ನೆಯಲ್ಲೂ ಕೊಟ್ಟಿದ್ದಾರೆ.

ಶ್ರೀ ವಿ.ಸುನೀಲ್‌ಕುಮಾರ್ : ಈ ಹಿಂದೆ ಮಂಜೂರಾಗಿದ್ದು, ಇದುವರೆಗೆ ಏಕೆ ಅವರಿಗೆ ಹಕ್ಕುಪತ್ರಗಳನ್ನು ಕೊಟ್ಟಿಲ್ಲವೆಂಬುದನ್ನು ಸರ್ಕಾರ ಸ್ಪಷ್ಟ ಮಾಡಬೇಕಾಗಿದೆ. ಅದಕ್ಕೆ 15 ದಿವಸಗಳ ಕಾಲಾವಕಾಶ ಏಕೆ? ಅಕ್ರಮ–ಸಕ್ರಮದಲ್ಲಿ ಯಾರ್ಯಾರಿಗೆ ಸಮಿತಿಯಲ್ಲಿ ಹಕ್ಕುಪತ್ರ ಮಂಜೂರಾಗಿದೆ ಅವರಿಗೆ ಹಕ್ಕುಪತ್ರಗಳನ್ನು ಕೊಡಿಯೆಂದು ಕೇಳಿದ್ದೇವೆ.

ಅಧ್ಯಕ್ಷರು : ಇದಕ್ಕೆ ಉತ್ತರ ಬಂದಿಲ್ಲ. ಕೇವಲ 8 ದಿವಸ Wait ಮಾಡಿ.

ಶ್ರೀ ವಿ.ಶ್ರೀನಿವಾಸ ಪ್ರಸಾದ್ : ಆದಷ್ಟು ಬೇಗನೆ ಉತ್ತರ ಕೊಡುತ್ತೇವೆ.

ಶ್ರೀ ಜಗದೀಶ್ ಶೆಟ್ಟರ್ : ಇವತ್ತಿನ ದಿವಸ Advanced Technology ಬಂದಿದೆ. ಕಂಪ್ಯೂಟರ್ ಇದೆ. ಅವುಗಳಿಂದ ಮಾಹಿತಿಗಳನ್ನು ಪಡೆದುಕೊಂಡು ತಕ್ಷಣ ಉತ್ತರ ಕೊಡಬಹುದಾಗಿದೆ. ಎಲ್ಲವೂ ರೆಕಾರ್ಡ್‌ನಲ್ಲಿರುತ್ತದೆ. ಮಾಹಿತಿಯನ್ನು ತಿಂಗಳುಗಟ್ಟಲೆ, ವರ್ಷಗಟ್ಟಲೆ ಕೊಡಬೇಕಾಗಿರುವುದಿಲ್ಲ. ಇದನ್ನು ಸರ್ಕಾರ ಅರ್ಥ ಮಾಡಿಕೊಂಡು ಉತ್ತರ ಕೊಡಬೇಕು.

ಅಧ್ಯಕ್ಷರು : ಮಾನ್ಯ ಕಂದಾಯ ಸಚಿವರೇ, ಇದರ ಬಗ್ಗೆ ಮಾಹಿತಿಯನ್ನು ಆದಷ್ಟು ಬೇಗನೆ ತರಿಸಿಕೊಡಿ. ಈಗ ಮಾನ್ಯ ಡಾ.ಕೆ.ಸುಧಾಕರ್ ರವರ ಪ್ರಶ್ನೆ.